310

# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 559(636)
2) ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 20.08.2026
4) ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಲೋಕಸೇವಾ ಆಯೋಗದಲ್ಲಿ (KPSC) ಇತ್ತೀಚಿಗೆ ನಡೆದ 400 ಜೂನಿಯರ್ ಇಂಜಿನಿಯರ್ ಹಾಗೂ ಇಂಡಸ್ಟ್ರೀಯಲ್ ಎಲೆಕ್ಟ್ರೀಷಿಯನ್ ಆಫೀಸರ್ ಹುದ್ದೆಗಳ ನೇಮಕಾತಿಯಲ್ಲಿ ಪ್ರತಿ ಹುದ್ದೆಗೆ ರೂ 70 ರಿಂದ 80 ಲಕ್ಷ ಲಂಚ ಪಡೆದಿರುವುದು ಮತ್ತು ಓಎಂಆರ್(OMR) ಶೀಟ್ ತಿದ್ದುಪಡಿ ಅಕ್ರಮದ ಹಿನ್ನೆಲೆಯಲ್ಲಿ KPSC ಅಧ್ಯಕ್ಷರನ್ನು ಸಂವಿಧಾನದ ಕಲಂ 317(1)ರ ಅಡಿಯಲ್ಲಿ ರಾಜ್ಯಪಾಲರು ಅಮಾನತ್ತುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಕರ್ನಾಟಕ ಲೋಕಸೇವಾ ಆಯೋಗದಿಂದ ಅಧಿಸೂಚಿಸಲಾದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಶಿವಶಂಕರಪ್ಪ ಎಸ್. ಸಾಹುಕಾರ್ ಇವರ ಕಿರಿಯ ಮಗಳು 3B/W ಮೀಸಲಾತಿಯಡಿ ಸುಳ್ಳು ಆದಾಯ ಪ್ರಮಾಣ ಪತ್ರದ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಿರುವ ಆರೋಪದ ಹಿನ್ನೆಲೆಯಲ್ಲಿ ದಿನಾಂಕ:10.07.2026ರಂದು ಗೌರವಾನ್ವಿತ ರಾಜ್ಯಪಾಲರು ಶ್ರೀ ಶಿವಶಂಕರಪ್ಪ ಎಸ್ ಸಾಹುಕಾರ್ ಇವರನ್ನು ಭಾರತದ ಸಂವಿಧಾನದ 317(2)ನೇ ವಿಧಿಯ ಅಡಿಯಲ್ಲಿ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಿಂದ ಮುಂದಿನ ಆದೇಶ ಬರುವವರೆಗೆ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ ಈ ಕುರಿತು ದಿನಾಂಕ 19.07.2026ರಂದು ಸಚಿವ ಸಂಪುಟವು ಘಟನೋತ್ತರ ಅನುಮೋದನೆ ನೀಡಿರುತ್ತದೆ.<br><br>ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ WP 21376/2026ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:18.08.2026 ರಂದು ನೀಡಿರುವ ಅಂತಿಮ ಆದೇಶದಲ್ಲಿ ಗೌರವಾನ್ವಿತ ರಾಜ್ಯಪಾಲರ ಆದೇಶ ಸಂಖ್ಯೆ:GS 28 ADM 2026 ದಿನಾಂಕ:10.07.2026ನ್ನು ವಜಾಗೊಳಿಸಿರುತ್ತದೆ.<br><br>ಸದರಿ ಆದೇಶದ ಹಿನ್ನೆಲೆಯಲ್ಲಿ ಸರ್ಕಾರದಿಂದ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ | ಕೆಪಿಎಸ್‌ಸಿಯಲ್ಲಿ ಕಳೆದ ಕೆಲವು ದಶಕಗಳಿಂದ 2011ರ ಗೆಜೆಟೆಡ್ ಪ್ರೊಬೇಷನರ್ಸ್, 2021ರ FDA ಪ್ರಶ್ನೆ ಪತ್ರಿಕೆ ಸೋರಿಕೆ, 2023ರ AE ಹುದ್ದೆಗಳ OMR ತಿದ್ದುಪಡಿ ಹಾಗೂ ಪ್ರಸ್ತುತ 2026ರ ಪ್ರಕರಣ ಸೇರಿದಂತೆ ಸಾಲು ಸಾಲು ಹಗರಣಗಳು ವರದಿಯಾಗುತ್ತಿರುವುದು ನಿಜವೇ, ಈ ಸಾಲು ಸಾಲು ಅಕ್ರಮಗಳಿಂದ ಆಯೋಗದ ವಿಶ್ವಾಸಾರ್ಹತೆ ಕುಸಿದಿರುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು. | ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸಲಾಗುತ್ತಿರುವ ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಹಲವಾರು ದೂರುಗಳು ಹಾಗು ಆರೋಪಗಳು ಸ್ವೀಕೃತವಾಗಿರುತ್ತವೆ<br><br>ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಮತ್ತೊಮ್ಮೆ ಸದರಿ ಲೋಪ ಉಂಟಾಗದಂತೆ ಆಯೋಗದಿಂದ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ<br><br>• ಪ್ರಶ್ನೆಪತ್ರಿಕೆ ಸಿದ್ಧಪಡಿಸುವಿಕೆ ಕಾರ್ಯವನ್ನು ನಿರ್ವಹಿಸುವ ಕೊಠಡಿಯ ಬಳಿ ಪೋಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಸದರಿ ಪೋಲೀಸ್ ಸಿಬ್ಬಂದಿಗಳು ಕೊಠಡಿಗೆ ಆಗಮಿಸುವ ಮತ್ತು ನಿರ್ಗಮಿಸುವ ಅಧಿಕಾರಿ/ಸಿಬ್ಬಂದಿಗಳನ್ನು Frisking ಮಾಡಿ. ಅವರುಗಳು ಯಾವುದೇ ರೀತಿಯ ಕಾಗದವಾಗಲೀ, ಎಲೆಕ್ಟ್ರಾನಿಕ್ ಉಪಕರಣಗಳನ್ನಾಗಲಿ, ಮೊಬೈಲ್ ಫೋನ್‌ಗಳನ್ನಾಗಲಿ ಅವರೊಂದಿಗೆ ಕೊಂಡೊಯ್ಯದಿರುವುದನ್ನು ಖಚಿತಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ<br>• ಸದರಿ ಕೊಠಡಿಯ ಭದ್ರತೆಗಾಗಿ ಆರಕ್ಷಕ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ಹಾಗೂ ನಿಯೋಜಿಸಲ್ಪಟ್ಟ ಆರಕ್ಷಕ ಸಿಬ್ಬಂದಿಯು ಒಂದು ರಿಜಿಸ್ಟಾರ್ ಅನ್ನು ತೆರೆದು ಪುಸ್ತಕದಲ್ಲಿ ಅಧಿಕಾರಿ/ಸಿಬ್ಬಂದಿಗಳು ಪ್ರತಿ ಬಾರಿ ಕೊಠಡಿಗೆ ಆಗಮಿಸುವ/ನಿರ್ಗಮಿಸುವ ಸಮಯವನ್ನು ನಮೂದಿಸಲು ಕ್ರಮಕೈಗೊಳ್ಳಲಾಗಿದೆ.<br>• ಸದರಿ ಕೊಠಡಿಗೆ DFMD (Door Frame Metal Detector) ಅನ್ನು ಅಳವಡಿಸಲಾಗಿದೆ<br>• ಆಯೋಗದ ಕೇಂದ್ರ ಕಛೇರಿಯಲ್ಲಿನ ಭದ್ರತಾ ಕೊಠಡಿಯ ಬಳಿ |

| | | |
|---|---|---|
| | | ಭದ್ರತೆಯ ದೃಷ್ಟಿಯಿಂದ 24X7 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿರುವುದಲ್ಲದೆ, ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.<br>• ಪ್ರಶ್ನಪತ್ರಿಕೆಗಳನ್ನು ಭದ್ರಪಡಿಸಲಾದ ಜಿಲ್ಲೆಗಳ ಖಜಾನೆ ಮತ್ತು ತಾಲ್ಲೂಕುಗಳ ಉಪಖಜಾನೆಗಳಿಗೆ 24X7 ಸಶಸ್ತ್ರ ಪೊಲೀಸ್ ಭದ್ರತೆ ನೀಡುವಂತೆ ಪೊಲೀಸ್ ಆಯುಕ್ತರುಗಳಿಗೆ, ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗುತ್ತಿದೆ<br>• ಪರೀಕ್ಷಾ ಗೋಪ್ಯ ಸಾಮಗ್ರಿಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳಲ್ಲಿ ಠೇವಣಿ ಇರಿಸುವ, ಪರಿಶೀಲನೆ ಹಾಗೂ ವಿತರಣೆ ಸಮಯದಲ್ಲಿ ಅನುಕ್ರಮವಾಗಿ ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾ ಖಜಾನಾಧಿಕಾರಿಗಳು ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳ 'ಜಿಲ್ಲಾ ತ್ರಿಸದಸ್ಯ ಸಮಿತಿ'ಯನ್ನು ಮತ್ತು ಸಹಾಯಕ ಆಯುಕ್ತರು ತಾಲ್ಲೂಕು ಉಪ ಖಜಾನಾಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ/ಶಿಕ್ಷಣ ಸಂಯೋಜಕರು ಇವರುಗಳ 'ತಾಲ್ಲೂಕು ತ್ರಿಸದಸ್ಯ ಸಮಿತಿ'ಯನ್ನು ರಚಿಸಿ, ಈ ತಂಡವು ಖುದ್ದಾಗಿ ಹಾಜರಿದ್ದು ಸದರಿ ಕಾರ್ಯಗಳನ್ನು ನಿರ್ವಹಿಸುವಂತೆ ಸೂಚಿಸಲಾಗುತ್ತಿದೆ<br>• ಅಭ್ಯರ್ಥಿಗಳು ಮೈಕ್ರೋ ಚಿಪ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಅಳವಡಿಸಿಕೊಳ್ಳದಿರುವ ಬಗ್ಗೆ ತಪಾಸಣೆ/ಫ್ರಿಸ್ಕಿಂಗ್ ಮಾಡಲು ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ ಹಾಗೂ ಪರೀಕ್ಷಾ ಉಪಕೇಂದ್ರಗಳಿಗೆ ಜಾಮರ್‌ಗಳನ್ನು ಅಳವಡಿಸಲಾಗುತ್ತಿದೆ.<br>• ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಅವಧಿಯಲ್ಲಿ ಪೊಲೀಸ್ ಬಂದೋಬಸ್ತ್ ನೀಡುವಂತೆ ಪೊಲೀಸ್ ಆಯುಕ್ತರುಗಳಿಗೆ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೋರಲಾಗುತ್ತಿದೆ. |
| ಇ | ಈ ಅಕ್ರಮಗಳ ಕುರಿತು ಎಫ್‌ಐಆರ್‌ಗಳು(FIR) ದಾಖಲಾಗಿದ್ದರೂ ಆಂತರಿಕ ತನಿಖಾ ವರದಿಗಳು ತಡೆಹಿಡಿಯಲ್ಪಡುತ್ತಿರುವುದು ಮತ್ತು ವಿರೋಧ ಪಕ್ಷಗಳು ಆರೋಪಿಸುತ್ತಿರುವ ರೂ.800 ಕೋಟಿಗೂ ಅಧಿಕ ಮೌಲ್ಯದ ಕೆ.ಪಿ.ಎಸ್.ಸಿ. ನೇಮಕಾತಿ ಹಗರಣದ ಸಮಗ್ರ ತನಿಖೆಗೆ ಸರ್ಕಾರ ಸಿಬಿಐ(CBI) ಅಥವಾ ನ್ಯಾಯಾಂಗ ತನಿಖೆಗೆ ಆದೇಶಿಸುವುದೆ; | ಪಶು ವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಹಿನ್ನಲೆಯಲ್ಲಿ (FIR 89/2026) ಸದರಿ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ |
| ಈ | ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಓಎಂಆರ್ ತಿದ್ದುಪಡಿ ಹಾಗೂ ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಸಂಪೂರ್ಣವಾಗಿ ತಡೆಯಲು ಪಿ.ಸಿ.ಹೋಟಾ ಸಮಿತಿ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಮತ್ತು ಕೆ.ಪಿ.ಎಸ್.ಸಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸುಧಾರಿಸಲು ಸರ್ಕಾರ ರೂಪಿಸಿರುವ ಕಟ್ಟುನಿಟ್ಟಿನ ಕ್ರಮಗಳೇನು: | ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗಾಗಿ ರಚಿಸಲಾದ ಹೋಟಾ ಸಮಿತಿಯು ನೀಡಿದ 40 ಶಿಫಾರಸ್ಸುಗಳಲ್ಲಿ 39 ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ<br><br>ಸ್ಪರ್ಧಾತ್ಮಕ ಪರೀಕ್ಷೆಗಳ ಹಾಗೂ ವ್ಯಕ್ತಿತ್ವ ಪರೀಕ್ಷೆಗಳ ಎಲ್ಲಾ ಗೌಪ್ಯ ವಿಷಯಗಳ ಮಾಹಿತಿಯನ್ನು ನಿರ್ವಹಿಸಲು ಭಾರತೀಯ ಆಡಳಿತ ಸೇವೆಯ ಹಿರಿಯ ವೇತನ ಶ್ರೇಣಿಯಲ್ಲಿರುವ ಅಧಿಕಾರಿಯನ್ನು ನೇಮಿಸುವ ಸಲುವಾಗಿ ಒಂದು ಪರೀಕ್ಷಾ ನಿಯಂತ್ರಕರ ಹುದ್ದೆ(Controller of Examination)ಯನ್ನು ಸೃಜಿಸಲಾಗಿರುತ್ತದೆ.<br><br>ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ(ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ) ನಿಯಮಗಳು 1997ರಲ್ಲಿ ಪೂರ್ವಭಾವಿ ಪರೀಕ್ಷೆ, ಮುಖ್ಯಪರೀಕ್ಷೆಯ ಪಠ್ಯ ಕ್ರಮಗಳನ್ನು, ವ್ಯಕ್ತಿತ್ವ ಪರೀಕ್ಷೆಯ ವಿಧಾನಗಳನ್ನು ಮತ್ತು ಮುಖ್ಯ ಪರೀಕ್ಷೆಯ ಹಾಗೂ ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು ಅಂತಿಮ ಆಯ್ಕೆ ಪಟ್ಟಿಯ ಜೊತೆಗೆ ಪ್ರಕಟಿಸುವಂತೆ ತಿದ್ದುಪಡಿ ಮಾಡಲಾಗಿದೆ<br>ಮುಂದುವರೆದು, ಸುಧಾರಣೆಗಳು ಅನುಷ್ಠಾನಗೊಳಿಸುವ ರೀತಿಯಲ್ಲಿ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ.<br><br>• ಪರೀಕ್ಷಾ ಅಭ್ಯರ್ಥಿಗಳಿಗೆ ವೈಯಕ್ತೀಕರಿಸಿದ (Personalised OMR) ಓ.ಎಂ.ಆರ್ ಉತ್ತರಹಾಳೆಗಳನ್ನು ಒದಗಿಸಲಾಗುತ್ತಿದೆ.<br>• ಅಭ್ಯರ್ಥಿಗಳು ಪರೀಕ್ಷೆ ಬರೆದ ನಂತರ ಪರೀಕ್ಷಾ ಉಪಕೇಂದ್ರದಲ್ಲಿಯೇ ಓ.ಎಂ.ಆರ್. ಹಾಳೆಗಳನ್ನು ಎರಡು |

| | | |
|---|---|---|
| | | ಭಾಗಗಳಾಗಿ ವಿಭಜಿಸಿ ಪ್ರತ್ಯೇಕ Tamper Evident Cover ನಲ್ಲಿ ಇರಿಸಿ ಸೀಲ್ ಮಾಡಲಾಗುತ್ತದೆ. ಸೀಲ್ ಮಾಡಿದ ಬಂಡಲ್‌ಗಳನ್ನು ಅಂಚೆ ಕಛೇರಿಯ ಮೂಲಕ ಆಯೋಗಕ್ಕೆ ರವಾನಿಸಲಾಗುತ್ತದೆ<br>• ಅಂಚೆ ಕಛೇರಿಯಿಂದ ಆಯೋಗದಲ್ಲಿ ಸ್ವೀಕೃತವಾದ ಬಂಡಲ್‌ಗಳನ್ನು ಸಿ.ಸಿ. ಟಿ.ವಿ ಕಣ್ಗಾವಲಿನಲ್ಲಿ ಸ್ಕ್ಯಾನಿಂಗ್ ಸಂಸ್ಥೆಯವರಿಂದ ಬಂಡಲ್‌ಗಳಿಂದ ಉತ್ತರ ಹಾಳೆಗಳನ್ನು ಹೊರತೆಗೆಸಿ ಎರಡು ಭಾಗಗಳಾಗಿವ ಓ.ಎಂ.ಆರ್. ಉತ್ತರ ಹಾಳೆಗಳನ್ನು ಪ್ರತ್ಯೇಕವಾಗಿ ಸ್ಕ್ಯಾನಿಂಗ್ ಮತ್ತು ಪ್ರೊಸೆಸಿಂಗ್ ಕಾರ್ಯಕ್ಕೆ ಒಳಪಡಿಸಿರುವುದರಿಂದ ಯಾವ ಉತ್ತರ ಹಾಳೆಯು ಯಾರಿಗೆ ಸಂಬಂಧಿಸಿದ್ದು ಎಂಬ ಮಾಹಿತಿಯು ಬಹಿರಂಗಗೊಳ್ಳುವುದಿಲ್ಲ.<br>• ವಿವರಣಾತ್ಮಕ ಉತ್ತರ ಪುಸ್ತಿಕೆಗಳಿಗೆ ಸಂಬಂಧಿಸಿದಂತೆ ಕೌಂಟರ್ ಫಾಯಿಲ್‌ಗಳಿಂದ ಉತ್ತರ ಪುಸ್ತಿಕೆಗಳನ್ನು ಪ್ರತ್ಯೇಕಗೊಳಿಸಿ ವಿವಿಧ ಪರೀಕ್ಷಾ ಉಪಕೇಂದ್ರಗಳಿಂದ ರವಾನೆಯಾದ ಉತ್ತರ ಪುಸ್ತಿಕೆಗಳನ್ನು ಮಿಶ್ರಣಗೊಳಿಸಿ (Shuffle) ಪ್ಯಾಕೇಟ್‌ಗಳನ್ನಾಗಿ ಸಿದ್ಧಪಡಿಸಿ ಹಸ್ತಚಾಲಿತ/ಗಣಕೀಕೃತ (Mannual/Digital) ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತಿದ್ದು. ಇಲ್ಲಿಯೂ ಸಹ ಯಾವ ಉತ್ತರ ಪುಸ್ತಿಕೆ ಯಾವ ಅಭ್ಯರ್ಥಿಗೆ ಸಂಬಂಧಿಸಿದ್ದು ಎಂಬುದು ತಿಳಿಯದಂತೆ ಮೌಲ್ಯಮಾಪನಕ್ಕೆ ಒಳಪಡಿಸುತ್ತಿದ್ದು, ಯಾವುದೇ ರೀತಿಯ ಅಕ್ರಮಕ್ಕೆ ಆಸ್ಪದವಾಗದಂತೆ ಮೌಲ್ಯಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತಿದೆ. |

**ಸಂಖ್ಯೆ: ಸಿಆಸುಇ 184 ಎಸ್‌ಎಲ್‌ಎ 2026**

**(ಡಿ.ಕೆ.ಶಿವಕುಮಾರ್)**
ಮುಖ್ಯಮಂತ್ರಿ